**ಸಾಕ್ಷಿಯನ್ನು ದಿಃ 15.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ನಮ್ಮ ಅಣ್ಣನ ಮಗನ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ಸದರಿ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ, ಇಲ್ಲ.

2. ನಾನು 5 ನೇ ಪ್ರತಿವಾದಿ ಅನ್ಯೋನ್ಯವಾಗಿ ಇದ್ದೇವೆ.

3. ನಿಮ್ಮ ತಂದೆ ಎಸ್.ಎಂ.ಮರಿಯಪ್ಪನವರ ಅವರ ಜೀವಿತ ಕಾಲದಲ್ಲಿ ನಿಮ್ಮ ಸಹೋದರರ ನಡುವೆ ವಿಭಾಗ ಪತ್ರವಾಗಿದೆಯಾ ಎಂದರೆ, ಇಲ್ಲ.

4. ನನ್ನ ತಂದೆ ಮರಿಯಪ್ಪನವರಿಗೆ ಮೂರು ಜನ ಪತ್ನಿಯರಿಂದ ಒಟ್ಟು 19 ಜನ ಮಕ್ಕಳು. ಸದರಿ 3 ಪತ್ನಿಯವರು ಹಾಗೂ 19 ಜನರ ಮಧ್ಯೆ ಯಾವುದೇ ವಿಭಾಗ ಪತ್ರ ಆಗಿಲ್ಲ, ಆದರೆ ಮೂರೂ ಜನ ಪತ್ನಿಯರಿಗೆ ವಿಭಾಗ ಮಾಡಿರುತ್ತಾರೆ. ಆ ಬಗ್ಗೆ ಬರವಣಿಗೆ ಆಗಿಲ್ಲ, ಮೌಖಿಕವಾಗಿ ಆಗಿರುತ್ತದೆ.

5. ಪಾಲುಪಟ್ಟಿ ಪ್ರಕಾರ ಜಮೀನು ಬರಬೇಕು ಎಂದು ವಾದಿಗಳು ಈ ದಾವೆ ಹಾಕಿದ್ದಾರೆ.

6. ಈ ದಾವೆಯನ್ನು ಎರಡು ಸರ್ವೇ ನಂಬರ್ ಗೆ ಹಾಕಿರುತ್ತಾರೆ.

7. ಸ.ನಂ.26 ರಲ್ಲಿ 21 ಗುಂಟೆ ಹಾಗೂ ಸ.ನಂ.24/8 ರಲ್ಲಿ 14 ಗುಂಟೆ ಬಗ್ಗೆ ದಾವೆ ಹಾಕಿರುತ್ತಾರೆ.

8. ದಿಃ 16.03.2004 ರಂದು ಆದ ವಿಭಾಗ ಪತ್ರದ ಪ್ರಕಾರ ಸ.ನಂ.26 ರಲ್ಲಿ ನನಗೆ ಜಮೀನು ಬಂದಿಲ್ಲ. ಸ.ನಂ.24/8 ರಲ್ಲಿ 15 ಗುಂಟೆ ಬಂದಿರುತ್ತದೆ.

9. ಸ.ನಂ.26 ರಲ್ಲಿ 4 ಎಕರೆ 3 ಗುಂಟೆ ಜಮೀನು ಇದೆ.

10. ಸ.ನಂ.26 ರಲ್ಲಿ ಮಹಾದೇವಪ್ಪ ನವರಿಗೆ 21 ಗುಂಟೆ, ಪ್ರೇಮ್ ಕುಮಾರ್ ರವರಿಗೆ 1 ಎಕರೆ 8 ಗುಂಟೆ, ಅಶೋಕರವರಿಗೆ 1 ಎಕರೆ 5 ಗುಂಟೆ, ಪುರುಷೋತ್ತಮ ರವರಿಗೆ 22 ಗುಂಟೆ, ಬಾಲಕೃಷ್ಣ ರವರಿಗೆ 22 ಗುಂಟೆ ಬಂದಿರುತ್ತದೆ. ಸದರಿ ವಿಭಾಗ ನಮ್ಮ ತಂದೆ ಕಾಲದಲ್ಲಿ ಆಗಿರಲಿಲ್ಲ.

11. ನನ್ನ ತಂದೆ ಮರಣ ಹೊಂದಿದ ದಿನಾಂಕ ನನಗೆ ನೆನಪಿಲ್ಲ.

12. ನಾನು ಬಿ.ಎ ಪದವೀಧರ.

13. ದಿಃ 16.03.2004 ರ ವಿಭಾಗ ಪತ್ರಕ್ಕೆ ನಿಮ್ಮ ಸೋದರಿಯರು ಸೇರಿ ಮಾಡಿಕೊಂಡಿದ್ದರಾ ಎಂದರೆ, ವಿಭಾಗ ಪತ್ರ ಮಾಡುವಾಗ ಎಲ್ಲರೂ ಇದ್ದರೂ, ಆದರೆ ಅವರು ತಮಗೆ ಏನೂ ಬೇಡ ಎಂದು ಹೇಳಿರುತ್ತಾರೆ. ಸದರಿ ವಿಚಾರವನ್ನು ವಿಭಾಗ ಪತ್ರದಲ್ಲಿ ನಮೂದಿಸಿಲ್ಲ.

14. ಲಕ್ಷ್ಮಮ್ಮ ನವರು ಯಾವಾಗ ಮೃತರಾದರು ಎಂದು ನೆನಪಿಲ್ಲ. 4-5 ವರ್ಷ ಆಗಿರಬಹುದು.

15. ನಿಪಿ - 7 ರಂತೆ ದಾವಾ ಸ್ವತ್ತುಗಳು 1990 ರಲ್ಲಿ ಲಕ್ಷ್ಮಮ್ಮ ಬಿನ್ ಹಬ್ಬೀಗೌಡ ರವರ ಹೆಸರಿನಲ್ಲಿದ್ದವು ಎಂದರೆ ಸರಿ.

16. 1986 ರಿಂದ 1990 ರ ವರೆಗೆ ಮರಿಯಪ್ಪನವರ ಹೆಸರಿಗೆ ಖಾತೆ ಇತ್ತು ಎಂದರೆ ಸರಿ.

17. ಪ್ರೇಮ್ ಕುಮಾರ್ ರವರಿಗೆ ದಾವಾ ಸ್ವತ್ತುಗಳು ಯಾವ ವರ್ಷದಲ್ಲಿ ಖಾತೆಯಾದವು ಎಂದು ನೆನಪಿಲ್ಲ.

18. ದಿಃ 16.03.2004 ರಂದು ಪಾಲುಪಾರಿಕತ್ತು ಆದಾಗ ಲಕ್ಷ್ಮಮ್ಮ ನವರು ಜೀವಂತವಾಗಿದ್ದರು.

19. ವಿಭಾಗ ಪತ್ರ ಮಾಡಿಕೊಳ್ಳುವಾಗ ಲಕ್ಷ್ಮಮ್ಮ ನವರ ಹೆಸರಿಗೆ ನಮೂದು ಇದ್ದ ಕಾರಣ ಅವರನ್ನು ಪಕ್ಷಗಾರರಾಗಿ ಮಾಡಿದ್ದೀರಾ ಎಂದರೆ, ಇಲ್ಲ. ನಮ್ಮ ಸಹೋದರರ ನಡುವೆ ಮಾತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ.

20. ಯಾವುದೇ ವಿಭಾಗ ಪತ್ರ ಮಾಡಬೇಕಾದರೆ ಯಾರ ಹೆಸರಿನಲ್ಲಿ ದಾಖಲೆ ಇವೆ ಎಂದು ನೋಡಿ ಮಾಡುತ್ತಾರೆ ಎಂದರೆ ಸರಿ.

21. ವಿಭಾಗಪತ್ರವನ್ನು ಯಾರು ತಯಾರಿಸಿರುತ್ತಾರೆ ಎಂದರೆ, ವಿಜಯಲಕ್ಷ್ಮೀ ರವರು ಮಾಡಿರುತ್ತಾರೆ.

22. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿಭಾಗ ಆಗದೇ ಇದ್ದರೂ ನಿಮಗೆ ಹಾಗೂ ಪ್ರತಿವಾದಿಗಳ ನಡುವೆ ಜಗಳ ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

23. ಪ್ರೇಮ್ ಕುಮಾರ ರವರು ಡಿ.ಸಿ ನ್ಯಾಯಾಲಯದಲ್ಲಿ ಪೋಡು ರದ್ದುಪಡಿಸುವಂತೆ ಕೇಸ್ ಹಾಕಿದ್ದಾರೆ ಎಂದರೆ, ನನಗೆ ನೆನಪಿಲ್ಲ.

24. ವಾದಿಗಳು ಈ ನ್ಯಾಯಾಲಯಕ್ಕೆ ಬರುವ ಮುಂಚೆ ಯಾವ ನ್ಯಾಯಾಲಯಕ್ಕೆ ಹೋಗಿದ್ದರು ಎಂದರೆ, ಎ.ಸಿ ನ್ಯಾಯಾಲಯಕ್ಕೆ ಹೋಗಿದ್ದರು ಎಂದು ನುಡಿಯುತ್ತಾರೆ. ಸದರಿ ಆದೇಶ ಏನಾಗಿದೆ ಎಂದು ನಾನು ತಿಳಿದುಕೊಂಡಿಲ್ಲ.

25. ಲಕ್ಷ್ಮಮ್ಮ ರವರ ಹೆಸರಿನಲ್ಲಿ ದಾವಾ ಸ್ವತ್ತುಗಳು 1990 ರಿಂದ ಅವರು ಮೃತವಾಗುವವರೆಗೂ ಇದ್ದವು ಎಂದರೆ ಸರಿ. ಅವರ ಜೀವಿತ ಕಾಲದಲ್ಲಿ ಅವರ ಮಕ್ಕಳು ಲೋಕೇಶ ಹಾಗೂ ರಾಘವೇಂದ್ರ ರವರಿಗೆ ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

26. ದಾವಾ ಸ್ವತ್ತುಗಳು ಹಾಗೂ ಯಾವುದೇ ಸ್ವತ್ತುಗಳು ಎಂದಿಗೂ ಸಹ ಪಾಲುಪರಿಕತ್ತಿನ ಪ್ರಕಾರ ಖಾತೆ ಆಗಿಲ್ಲ ಎಂದರೆ ಸರಿಯಲ್ಲ.

27. ಮಹಾದೇವ ರವರು ಯಾವಾಗ ಮೃತರಾದರು ಎಂದು ನನಗೆ ನೆನಪಿಲ್ಲ. ಅವರ ಜೀವಿತ ಕಾಲದಲ್ಲಿ ವಿಭಾಗ ಪತ್ರದ ಪ್ರಕಾರ ಖಾತೆ ಆಗಿಲ್ಲ ಎಂದು ನಿಮಗೆ ತಿಳಿಸಿದ್ದರಾ ಎಂದರೆ, ಇಲ್ಲ.

28. ಯಾವುದೇ ವಿಭಾಗವಾದ ನಂತರ ಎಲ್ಲರಿಗೂ ಸಮಾನವಾಗಿ ಎಂ.ಆರ್ ಆಗಬೇಕು ಎಂದರೆ, ಅವರು ಬೇಕಾದಾಗ ಮಾಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ.

29. ಮಹಾದೇವರವರು ಖಾತೆ ಮಾಡಿಕೊಡುವಂತೆ ತಾಲೂಕು ಕಛೇರಿಗೆ ಅರ್ಜಿ ಹಾಕಿದ್ದರಾ ಎಂದರೆ, ಕೊಟ್ಟಿದ್ದರು ಎಂದು ನುಡಿಯುತ್ತಾರೆ.

30. ದಾವಾ ಸ್ವತ್ತಿನಲ್ಲಿ ಲಕ್ಷ್ಮಮ್ಮ ನವರ ಮಕ್ಕಳು ಮಾತ್ರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ